ಕರ್ನಾಟಕ ವಿಧಾನ ಸಭೆ

ಸೋಮವಾರ 28ನೇ ಜೂನ್ 2004 ರಂದು

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11 ಗಂಟೆಗೆ ಸಮಾವೇಶಗೊಂಡಿತು

ಅಧ್ಯಕ್ಷರು (ಶ್ರೀ ಕೃಷ್ಣ) ರವರು

ಪೀಠವನ್ನು ಅಲಂಕರಿಸಿದ್ದರು

ಭಾಗ–I

1 ಪ್ರಮಾಣ ವಚನ ಅಥವಾ ಪ್ರತಿಜ್ಞಾ ವಚನ ಸ್ವೀಕಾರ

(ಈ ಹಂತದಲ್ಲಿ ಪ್ರಮಾಣ ವಚನ ಸ್ವೀಕರಿಸಲಿದ್ದ ಮಾನ್ಯ ಸದಸ್ಯರು ಆಂಗ್ಲ ಭಾಷೆಯಲ್ಲಿ ಪ್ರಮಾಣ ವಚನ ಸ್ವೀಕರಿಸಲು ಪ್ರಾರಂಭಿಸಿದರು)

Sri Ivan Nigli (Nominated) Ivan Nigli having been nominated a Member of the Legislative Assembly

ಶ್ರೀ ವಾಟಾಳ್ ನಾಗರಾಜ್(ಚಾಮರಾಜನಗರ) ತಾವು ಕನ್ನಡದಲ್ಲೇ ಪ್ರಮಾಣ ವಚನ ಸ್ವೀಕರಿಸಬೇಕು ತಾವು ಈ ರಾಜ್ಯದ ಶಾಸನ ಸಭೆಗೆ ನಾಮಕರಣಗೊಂಡಿದ್ದೀರಿ ಈ ರಾಜ್ಯದ ಭಾಷೆ ಕನ್ನಡ ಅದರ ಬಗ್ಗೆ ತಮಗೆ ಗೌರವ ಇರಬೇಕು ತಮಗೆ ಹೇಗೆ ಬರುತ್ತದೋ ಹಾಗೆ ಕನ್ನಡದಲ್ಲೇ ಮಾತನಾಡಿ ತಾವು ಇಂಗ್ಲಿಷ್‌ನಲ್ಲೇ ಮಾತನಾಡಬೇಕೆಂದಿದ್ದರೆ ಈ ಸದನಕ್ಕೆ ಬರುವ ಅವಶ್ಯಕತೆ ಇರಲಿಲ್ಲ ದಯವಿಟ್ಟು ಕನ್ನಡದಲ್ಲೇ ಪ್ರಮಾಣ ವಚನ ತಗೆದುಕೊಳ್ಳಿ

ಶ್ರೀ ಕೆ ಎಂ ಕೃಷ್ಣಮೂರ್ತಿ ಕನ್ನಡ ಮಾತ್ರ ಚೆನ್ನಾಗಿಯೇ ಮಾತನಾಡಬೇಕು ಹೇಗೇಗೋ ಮಾತನಾಡಿದರೆ ಅದು ಕನ್ನಡ ಆಗುವುದಿಲ್ಲ

ಅಧ್ಯಕ್ಷರು ಮಾನ್ಯ ಸದಸ್ಯರಿಂದ ಪ್ರಮಾಣ ವಚನ ಸ್ವೀಕಾರ

Sri Ivan Nigli (Nominated) I, Ivan Nigli having been nominated a member of the Legislative Assembly do swear in the name of god that I will bear true faith and allegiance to the constitution of India as by law established, that I will upheld the sovereignty and integrity of India and that I will faithfully discharge the duty upon which I am about to enter

(ಆದಾಗ್ಯೂ ಭಾರತ ಸಂವಿಧಾನದ 333ನೇ ಅನುಚ್ಛೇದದ ಮೇರೆಗೆ ಸನ್ಮಾನ್ಯ ರಾಜ್ಯಪಾಲರಿಂದ 12ನೇ ವಿಧಾನ ಸಭೆಗೆ ಸದಸ್ಯರಿಗೆ ನಾಮ ನಿರ್ದೇಶನಗೊಂಡಿರುವ **ಶ್ರೀ ಐವಾನ್ ನಿಗ್ಲಿರವರು** ಆಂಗ್ಲ ಭಾಷೆಯಲ್ಲಿ ದೇವರ ಹೆಸರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು)

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೇ..

ಅಧ್ಯಕ್ಷರು ಮಾನ್ಯ ವಾಟಾಳ್‌ರವರೇ, ನಾನು ತಮಗೆ ಅನಂತರ ಮಾತನಾಡಲು ಅವಕಾಶ ಮಾಡಿಕೊಡುತ್ತೇನೆ ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಮಂಡನೆ

2 ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

ಶ್ರೀ ಎಂ ಪಿ ಪ್ರಕಾಶ್ (ಕಂದಾಯ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) (ಮುಖ್ಯಮಂತ್ರಿ ಅವರ ಪರವಾಗಿ)

1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ, 8(3)ರ ಪ್ರಕರಣದ ಮೇರೆಗೆ